## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 942/2024 ಸಿಡಬ್ಲೂ : 1 ಪಿಡಬ್ಲೂಃ 1

ಪ್ರಮಾಣವಚನ ಬೋಧಿಸಲಾಯಿತು ದಿಃ 06-11-2025

ಹೆಸರು : ರವಿಕುಮಾರ್

ತಂದೆ ಹೆಸರು : ಚಂದ್ರಶೇಖರ್ ಪಾಟೀಲ್

ವಯಸ್ಸು : 36 ವರ್ಷ

ಉದ್ಯೋಗ : ಅಬಕಾರಿ ನೀರೀಕ್ಷಕರು, ಕುಷ್ಟಗಿ ವಲಯ,

ವಾಸಸ್ಥಳ : ಕುಷ್ಟಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 01-12-2020 ರಿಂದ 31-01-2025 ರವರೆಗೆ ಸೇಡಂ ವಲಯದಲ್ಲಿ ಅಬಕಾರಿ ನಿರೀಕ್ಷಕರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ21-11-2023 ರಂದು ನಾನು ಮತ್ತು ನಮ್ಮ ವಾಹನ ಚಾಲಕ ಚಾ ಸಾ 6 ರವರು ಸೇರಿ ಇಲಾಖೆ ವಾಹನ ಸಂಖ್ಯೆ ಕೆ ಎ 32 ಜಿ 1203 ಮುಖಾಂತರ ಮಳಖೇಡ್ ಸ್ಟೇಷನ್ ತಾಂಡಾದಲ್ಲಿರುವ ಜುಮಕಾ ವೈನ್ಸ್ ನೇದ್ದನ್ನು ಪರಿಶೀಲನೆ ಮಾಡಲು ಹೋದಾಗ ಆಗ ಸುಮಾರು ರಾತ್ರಿ 07-30 ಗಂಟೆ ಆಗಿತ್ತು. ಆಗ ಒಬ್ಬ ವ್ಯಕ್ತಿ ಬಾಟಲಿನಲ್ಲಿ ಸರಾಯಿ ತೆಗೆದುಕೊಂಡು ಮತ್ತು ಕೈಯಲ್ಲಿ ಸಿಗರೇಟ್ ಹಿಡಿದುಕೊಂಡು ನಮ್ಮ ವಾಹನದ ಬೋನಟ್ ಮೇಲೆ ಸರಾಯಿ ಇಟ್ಟು ಮದ್ಯಸೇವನೆ ಮಾಡುತ್ತಿದ್ದಾಗ ನಾನು ಆತನಿಗೆ ಈರೀತಿಯಾಗಿ ಸಾರ್ವಜಸಿಕ ಸ್ಥಳದಲ್ಲಿ ಇಲಾಖೆಯ ವಾಹದ ಮೇಲೆ ಮದ್ಯಬಾಟಲಿ ಇಟ್ಟು ಮದ್ಯಸೇವನೆ ಮಾಡುವುದು ಸರಿಯಿಲ್ಲ ಅಂತಾ ಹೇಳಿದಕ್ಕೆ ಆತನು ನನಗೆ ನೀ ಯಾರು ನನಗೆ ಹೇಳುವುದಕ್ಕೆ ಅಂತಾ ಅವಾಚ್ಯ ಶಬ್ದಗಳಿಂದದು ಬೈದು ನನ್ನ ಕಾಲರ್ ಹಿಡಿದು ಎಳೆದಾಡಿರುತ್ತಾನೆ. ಅದೇ ರೀತಿ ಕೈ ಮುಂದ ಒಂದು ಏಟು ಹೊಡೆದಿರುತ್ತಾನೆ. ಅಷ್ಟ ರಲ್ಲಿ ಜುಮಕಾ ವೈನ್ಸ ಮೇನೆಜರ್ ಆದ ಚಾ ಸಾ 4 ರಿಂದ 6 ರವರು ಬಂದು ಜಗಳ ಬಿಡಿಸಿದರು. ಆಗ ಆ ವ್ಯಕ್ತಿ ಯಾರು ಎಂದು ವಿಚಾರಣೆ ಮಾಡಲಾಗಿ ಆತನ ಹೆಸರು ಚಂದ್ರಶೇಖರ್ ತಂದೆ ಬಸವಣಪ್ಪ ಬಿರಾದಾರ್ ಸಾಕಿನ್ ಅಂಗನಹಳ್ಳಿ ಎಂದು ತಿಳಿದುಬಂದಿತ್ತು. ನಂತರ ಈ ಬಗ್ಗೆ ನಾವು ನಮ್ಮ ಮೇಲಧಿಕಾರಿಗಳೊಂದಿಗೆ ಚರ್ಚೆ ಮಾಡಿ ಮರುದಿನ ಅಂದೆರ ದಿ. 22-11-2023 ರಂದು ಮಳಖೇಡ್

ಪೋಲೀಸ್ ಠಾಣೆಗೆ ಹೋಗಿ ಆರೋಪಿತನು ಸರ್ಕಾರಿ ಕರ್ತವ್ಯಕ್ಕೆ ಅಡೆತಡೆ ಮಾಡಿರುವ ಬಗ್ಗೆ ಆತನ ವಿರುದ್ದ ದೂರನ್ನು ಸಲ್ಲಿಸಿರುತ್ತೆನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿತರ ಪರ ಶ್ರೀ ಎ ಎಂ ವಕೀಲರಿಂದಃ

ದಿ.21-11-2023 ರಂದು ಸಾಯಂಕಾಲ 07-15 ಗಂಟೆಗೆ ಮಳಖೇಡ್ ಸ್ಟೇಷನ್ ತಾಂಡಾಕ್ಕೆ ಹೋಗಿದ್ದು ಇತ್ತು. ಯಾವುದೇ ಮದ್ಯ ಅಂಗಡಿಯಲ್ಲಿ ಸಾಯಂಕಾಲ ಗ್ರಾಹಕರು ಜಾಸ್ತಿ ಇರುತ್ತಾರೆ ಎಂದರೆ ಸರಿ. ನಾವು ಜುಮಕಾ ವೈನ್ ಶಾಪ್ ಪರಿಶೀಲನೆ ಮಾಡುವುದಕ್ಕೆ ಅಂದಾಜು 15 ನಿಮಿಷ ಆಗಿರುತ್ತದೆ. ಪರಿಶೀಲನೆ ಆದ ನಂತರ ನಮ್ಮ ವಾಹನದ ಕಡೆಗೆ ಬಂದಿದ್ದೆವು ಎಂದರೆ ಸರಿ. ಸಿ ಎಲ್ -2 ವೈನ್ ಶಾಪ್ ನಲ್ಲಿ ಕುಳಿತುಕೊಂಡು ಮದ್ಯಪಾನ ಮಾಡಲು ಪರವಾನಗಿ ಇರುತ್ತದೆ ಎಂದರೆ ಸರಿ. ನಮ್ಮ ವಾಹನ ವೈನ್ ಶಾಪ್ ಎದುರುಗಡೆ ರಸ್ತೆ ಬೀದಿಯಲ್ಲಿ ನಿಂತಿತ್ತು. ನಾವು ಪರಿಶೀಲನೆ ಮಾಡುತ್ತಿರುವಾಗ ಸ್ದಳದಲ್ಲಿ ಎಷ್ಟು ಜನರು ಇದ್ದರು ಎಣಿಸಿಲ್ಲ. ನಾನು ವಾಹನವನ್ನು ನಿಲ್ಲಿಸಿದ ಸ್ದಳದಲ್ಲಿ ಸಾರ್ವಜನಿಕರು ಬಹಳಷ್ಟು ಜನರು ಓಡಾಡುತ್ತಾರೆ ಎಂದರೆ ಸರಿ. ನನ್ನ ದೂರಿನಲ್ಲಿ ಆರೋಪಿತನು ಯಾವ ಕಂಪನಿಯ ಸರಾಯಿ ಕುಡಿಯುತ್ತಿದ್ದನು ಹಾಗೂ ಎಷ್ಟು ಸರಾಯಿ ಇತ್ತು ಎಂಬುದರ ಕುರಿತು ಬರೆದಿಲ್ಲ ಎಂದರೆ ಸರಿ. ಗಲಾಟೆಯಾದಾಗ ನನಗೆ ಮತ್ತು ಚಾ ಸಾ 6 ರವರಿಗೆ ಹೊರತು ಪಡಿಸಿ ಸುಮಾರು 15 ರಿಂದ 20 ಜನರು ಸೇರಿದ್ದರು. ಅವರ ಹೆಸರು ಮತ್ತು ವಿಳಾಸ ನನಗೆ ಹೇಳಲು ಬರುವುದಿಲ್ಲ. ನಾವು ವಾಹನ ನಿಲ್ಲಿಸಿದ ಸ್ದಳ ಖಾಸಗಿ ಜಾಗ ಅಥವಾ ಸರ್ಕಾರಿ ಜಾಗ ಇರುವ ಬಗ್ಗೆ ನಿ ಪಿ 1 ರಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ನಿ ಪಿ 1 ದೂರನ್ನು ಸಲ್ಲಿಸುತ್ತಿರುವಾಗ ವೈನ್ ಶಾಪ್ ಪರಿಶೀಲನೆ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ಘಟನೆ ನಡೆದ ದಿನ ಯಾವ ಬಣ್ಣದ ಅಂಗಿಯನ್ನು ಧರಿಸಿರುತ್ತೇನೆ ಎಂಬುದರ ಕುರಿತು ನಿ ಪಿ 1 ರಲ್ಲಿ ಬರೆದಿಲ್ಲ ಎಂದರೆ ಸರಿ. ಆರೋಪಿತನು ನನ್ನ ಕಾಲರ್ ಹಿಡಿದಿರುವ ಬಗ್ಗೆ ಪೋಟೋ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಆದರೆ ಪೋಲೀಸರಿಗೆ ನೀಡಿರುತ್ತೇನೆ. ಅದೇ ರೀತಿ ಸದರಿ ಅಂಗಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಈ ಪ್ರಕರಣದಲ್ಲಿರುವ ಚಾ ಸಾ 2 ಜುಮಕ ವೈನ್ ಶಾಪ್ ಮಾಲೀಕ ಎಂದರೆ ಸರಿ. ಚಾ ಸಾ 5 ಸದರಿ ವೈನ್ ಶಾಪ್‌ನ ಮ್ಯಾನೇಜರ್ ಎಂದರೆ ಸರಿ. ವೈನ್ ಶಾಪ್ ರವರು ಯಾವಾಗಲೂ ನಮಗೆ ಗೌರವಕೊಡುತ್ತಾರೆ ಎಂದರೆ ಸರಿಯಿಲ್ಲ. ನಾನು ನಮ್ಮ ಸಾಹೇಬರಿಗೆ ಪೋನು

ಮುಖಾಂತರ ಮಾತನಾಡಿ ಫಿಯಾರ್ದಿಯನ್ನು ನೀಡಬಹುದು ಎಂದರೆ ಸರಿ. ನಾನು ದೂರನ್ನು ಸಲ್ಲಿಸಲು ವಿಳಂಬ ಆಗಿರುವ ಬಗ್ಗೆ ನ್ಯಾಯಾಲಯಕ್ಕೆ ತಿಡಿಳಿಸಿರುತ್ತೇನೆ. ನಾನು ವಿಳಂಬಕ್ಕೆ ಕಾರಣಗಳು ತಿಳಿಸಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ದಿಃ21-11-2023 ರಂದು ನಾನು ಮತ್ತು ನಮ್ಮ ವಾಹನ ಚಾಲಕ ಚಾ ಸಾ 6 ರವರು ಸೇರಿ ಇಲಾಖೆ ವಾಹನ ಸಂಖ್ಯೆ ಕೆ ಎ 32 ಜಿ 1203 ಮುಖಾಂತರ ಮಳಖೇಡ್ ಸ್ಟೇಷನ್ ತಾಂಡಾದಲ್ಲಿರುವ ಜುಮಕಾ ವೈನ್ಸ್ ನೇದ್ದನ್ನು ಪರಿಶೀಲನೆ ಮಾಡಲು ಹೋದಾಗ ಆಗ ಸುಮಾರು ರಾತ್ರಿ 07-30 ಗಂಟೆ ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಒಬ್ಬ ವ್ಯಕ್ತಿ ಬಾಟಲಿನಲ್ಲಿ ಸರಾಯಿ ತೆಗೆದುಕೊಂಡು ಮತ್ತು ಕೈಯಲ್ಲಿ ಸಿಗರೇಟ್ ಹಿಡಿದುಕೊಂಡು ನಮ್ಮ ವಾಹನದ ಬೋನಟ್ ಮೇಲೆ ಸರಾಯಿ ಇಟ್ಟು ಮದ್ಯಸೇವನೆ ಮಾಡುತ್ತಿದ್ದಾಗ ನಾನು ಆತನಿಗೆ ಈರೀತಿಯಾಗಿ ಸಾರ್ವಜಸಿಕ ಸ್ಥಳದಲ್ಲಿ ಇಲಾಖೆಯ ವಾಹದ ಮೇಲೆ ಮದ್ಯಬಾಟಲಿ ಇಟ್ಟು ಮದ್ಯಸೇವನೆ ಮಾಡುವುದು ಸರಿಯಿಲ್ಲ ಅಂತಾ ಹೇಳಿದಕ್ಕೆ ಆತನು ನನಗೆ ನೀ ಯಾರು ನನಗೆ ಹೇಳುವುದಕ್ಕೆ ಅಂತಾ ಅವಾಚ್ಯ ಶಬ್ದಗಳಿಂದದು ಬೈದು ನನ್ನ ಕಾಲರ್ ಹಿಡಿದು ಎಳೆದಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಕೈ ಮುಂದ ಒಂದು ಏಟು ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅಷ್ಟ ರಲ್ಲಿ ಜುಮಕಾ ವೈನ್ಸ ಮೇನೆಜರ್ ಆದ ಚಾ ಸಾ 4 ರಿಂದ 6 ರವರು ಬಂದು ಜಗಳ ಬಿಡಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಆ ವ್ಯಕ್ತಿ ಯಾರು ಎಂದು ವಿಚಾರಣೆ ಮಾಡಲಾಗಿ ಆತನ ಹೆಸರು ಚಂದ್ರಶೇಖರ್ ತಂದೆ ಬಸವಣಪ್ಪ ಬಿರಾದಾರ್ ಸಾಕಿನ್ ಅಂಗನಹಳ್ಳಿ ಎಂದು ತಿಳಿದುಬಂದಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಈ ಬಗ್ಗೆ ನಾವು ನಮ್ಮ ಮೇಲಧಿಕಾರಿಗಳೊಂದಿಗೆ ಚರ್ಚೆ ಮಾಡಿ ಮರುದಿನ ಅಂದೆರ ದಿ. 22-11-2023 ರಂದು ಮಳಖೇಡ್ ಪೋಲೀಸ್ ಠಾಣೆಗೆ ಹೋಗಿ ಆರೋಪಿತನು ಸರ್ಕಾರಿ ಕರ್ತವ್ಯಕ್ಕೆ ಅಡೆತಡೆ ಮಾಡಿರುವ ಬಗ್ಗೆ ಆತನ ವಿರುದ್ದ ದೂರನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಆರೋಪಿಗೂ ಹಾಗೂ ನನಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿ. ನಾನು ನಮ್ಮ ವೈಯುಕ್ತಿಕ ದ್ವೇಷದಿಂದ ನಾನು ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಿಲ್ಲ. ಘಟನೆ ನಡೆದ ದಿನ ಆರೋಪಿತನು ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಿಲ್ಲ. ಘಟನೆ ನಡೆದ ದಿನ ಆರೋಪಿತನು ಕುಡಿಯುತ್ತಿರುವ ಬಾಟಲನ್ನು ಪೋಲೀಸರಿಗೆ ನೀಡಿಲ್ಲ ಎಂದರೆ

ಸರಿ. ಚಾ ಸಾ 4 ವೈನ್ ಶಾಪ್ ಮಾಲೀಕನಾಗಿರುತ್ತಾನೆ ಎಂದರೆ ಸರಿ. ಚಾ ಸಾ 2 ರಿಂದ 6 ರವರು ಮತ್ತು ನಾನು ಕೂಡಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

(ಮರುವಿಚಾರಣೆ ಇಲ್ಲ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**